# ವಿದ್ಯಾರ್ಥಿಗಳು ಕೌಶಲ ಅಭಿವೃದ್ಧಿಗೆ ಆದ್ಯತೆ ನೀಡಿ: ರಾಜು



**ಉಳ್ಳಾಲ, ಮಾ.18:** ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ಮತ್ತು ಜೀವನದಲ್ಲಿ ಉದ್ಯೋಗ ಅತೀ ಮಹತ್ವದ್ದು ಶಿಕ್ಷಣದ ಸಂದರ್ಭದಲ್ಲಿ ವಿದ್ಯಾರ್ಥಿಗಳು ಕೌಶಲ್ಯ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿದಾಗ ವಿದ್ಯಾರ್ಥಿಗಳು ವೃತ್ತಿ ಜೀವನದಲಲಿ ಯಶಸ್ವಿಯಾಗಲು ಸಾಧ್ಯವಿದ್ದು ಇಂತಹ ತರಬೇತಿ ಕಾರ್ಯಕ್ರಮಗಳು ಪೂರಕವಾಗಿರುತ್ತದೆ ಎಂದು ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವ ರಾಜು ಮೊಗವೀರ ಅಭಿಪ್ರಾಯಪಟ್ಟರು.

ಉದ್ಯೋಗ ಮಾಹಿತಿ ಮತ್ತು ಮಾರ್ಗದರ್ಶನ ಕೇಂದ್ರ ಹಾಗೂ ಐಕ್ಯೂಎಸಿಯ ವತಿಯಿಂದ, ಒಪ್ಟಮ್ ಎ ಸಬ್ಸಿಡರಿ ಆಫ್ ಯುನೈಟೆಡ್ ಹೆಲ್ತ್ ಗ್ರೂಪ್ ಬೆಂಗಳೂರು ಇವರ ಸಹಯೋಗದೊಂದಿಗೆ ಮಂಗಳೂರು ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನಅಭ್ಯರ್ಥಿಗಳಿಗೆಉದ್ಯೋಗವನ್ನು ದೊರಕಿಸಿ ಕೊಡುವ ನಿಟ್ಟಿನಲ್ಲಿ ಕ್ಯಾಂಪಸ್ ಸೆಲೆಕ್ಷನ್ ಮತ್ತು 5 ವಾರಗಳ ವೈದ್ಯಕೀಯ ಕೋಡಿಂಗ್‌ನ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಒಪ್ಟಮ್‌ನ ಅಸೋಸಿಯೆಟ್ ಡೈರೆಕ್ಟರ್ ಕ್ಲೇಮೆಂಟ್ ಸಿಕ್ವೇರ, ಮ್ಯಾನೇಜರ್ ದಿವ್ಯಾ ದರ್ಶನ್, ವಾರನ್ ಡಿಕೋಸ್ತ ಹಾಗೂ ವೆನೆಸ್ಸಾ ಮಾಹಿತಿ ನೀಡಿದರು. ಉದ್ಯೋಗ ಮಾಹಿತಿ ಮತ್ತು ಮಾರ್ಗದರ್ಶನ ಕೇಂದ್ರದ ಮುಖ್ಯಸ್ಥ ಪ್ರೊ। ದಶರಥ ಪಿ. ಅಂಗಡಿ ಸ್ವಾಗತಿಸಿದರು. ಐಕ್ಯೂಎಸಿಯ ನಿರ್ದೇಶಕ ಪ್ರೊ।ಮೋನಿಕಾ ಸದಾನಂದ ಇವರು ವೈದ್ಯಕೀಯ ಕೋಡಿಂಗ್ ನ ಬಗ್ಗೆ ವಿವರಿಸಿದರು.ಉದ್ಯೋಗ ಮಾಹಿತಿ ಮತ್ತು ಮಾರ್ಗದರ್ಶನ ಕೇಂದ್ರದ ಸಲಹೆಗಾರ್ತಿ ಮತ್ತು ಟ್ರೈನರ್ ಜೋಸ್ಲಿನ್ ವಂದಿಸಿದರು. ಅನುಷ ಜ್ಯೋತ್ಸ್ನಾ ಕಾರ್ಯಕ್ರಮ ನಿರ್ವಹಿಸಿದರು.

ಒಟ್ಟು 185 ವಿದ್ಯಾರ್ಥಿಗಳು ಪ್ರಯೋಜನವನ್ನು ಪಡೆದುಕೊಂಡರು. ವಿದ್ಯಾರ್ಥಿಗಳಿಗೆ ಪ್ರಥಮವಾಗಿ ಪರೀಕ್ಷೆಯನ್ನು ನಡೆಸಿದರು. ಆನಂತರ ಸಂದರ್ಶನವನ್ನು ನಡೆಸಿ ಒಟ್ಟು 37 ವಿದ್ಯಾರ್ಥಿಗಳನ್ನು 5 ವಾರಗಳ ವೈದ್ಯಕೀಯ ಕೋಡಿಂಗ್ ತರಬೇತಿಗೆ ಆಯ್ಕೆ ಮಾಡಲಾಯಿತು.